# ಭೂಮಿ ತಾಯಿಯ ಚೊಚ್ಚಲ ಮಗ ಕಣ್ತೆರೆದೊಮ್ಮೆ ನೋಡುವಿರಾ

**ವರ್ಷದಿಂದ ವರ್ಷಕ್ಕೆ ಉಳುಮೆ ಹಾಗೂ ಒಳಸುರಿಗಳ ವೆಚ್ಚವನ್ನು ಪರಿಗಣಿಸಿ, ಕೃಷಿ ಉತ್ಪನ್ನಗಳಿಗೆ ವೈಜ್ಞಾನಿಕ ಬೆಲೆ ನಿಗದಿ ಮಾಡಬೇಕು ಎಂಬ ಅಳಲು ಈ ವರ್ಷದಲ್ಲಾದರೂ ಸಾಕಾರ ಆದೀತೇ?**



**ಆನಂದತೀರ್ಥ ಪ್ಯಾಟಿ**
ಸೃಜನಶೀಲ ಪತ್ರಕರ್ತ, ಪ್ರಯೋಗಶೀಲ ಕೃಷಿಕ

ಬೆವರು ಸುರಿಸಿ ದೇಶವಾಸಿಗಳಿಗೆ ಅನ್ನ ನೀಡುವ 'ಬೆನ್ನೆಲುಬು' ಯಾವತ್ತೂ ನಿರ್ಲಕ್ಷ್ಯಕ್ಕೆ ಈಡಾದದ್ದೇ ಹೆಚ್ಚು. ಅದೀಗ ಬಾಗಿದೆ; ಇನ್ನೇನು ಮುರಿದು ಬೀಳುವ ಹಂತದಲ್ಲಿದೆ. ಈಗಲಾದರೂ ಒಂದಷ್ಟು ಉಪಚಾರ, ಆಸರೆ ನೀಡಿದರೆ ಸುಧಾರಿಸಿಕೊಳ್ಳಬಹುದೇನೋ?

ಕೃಷಿಕರು ಎದುರಿಸುವ ಸಮಸ್ಯೆಗಳು ಪ್ರತಿ ಆರೆಂಟು ವರ್ಷಗಳಿಗೊಮ್ಮೆ ಹೊಸ ದಿರಿಸಿನಲ್ಲಿ ಪ್ರತ್ಯಕ್ಷವಾಗುತ್ತವೆ. ಉತ್ಪನ್ನಕ್ಕೆ ವೈಜ್ಞಾನಿಕ ದರ ಈಗಲೂ ಗಗನಕುಸುಮ ಎಂಬುದು ಒಂದೆಡೆಯಾದರೆ, ಆ ಉತ್ಪನ್ನ ಹೊರಬರಲು ಅಡ್ಡಿಯಾಗುವ ಪ್ರಾಕೃತಿಕ ವಿಕೋಪ ಮತ್ತೊಂದು ಬಗೆಯ ಸಮಸ್ಯೆ. ಅದರಲ್ಲೂ ಹವಾಮಾನ ವೈಪರೀತ್ಯದಿಂದಾಗಿ ಬೇಸಾಯ ಎಂಬುದು ಸಮಸ್ಯೆಗಳ ಕಗ್ಗಂಟು ಎಂಬಂತಾಗಿದೆ.

ಮೊದಲೆಲ್ಲ ಮಳೆ ನಕ್ಷತ್ರ, ಪಂಚಾಂಗ ಹಾಗೂ ಅಚೀಚಿನ ಮಾಹಿತಿ ಆಧರಿಸಿ ಕೃಷಿ ನಡೆಯುತ್ತಿತ್ತು. ಋತುಮಾನ ಕಾಲಚಕ್ರದಲ್ಲಿ ನಾಲ್ಕೈದು ವರ್ಷಗಳಿಗೊಮ್ಮೆ ತುಸು ಏರುಪೇರಾಗುತ್ತಿತ್ತು. ಹಾಗೆಂದು, ರೈತರು ಉಳುಮೆ ಬಿಡುವ ಯೋಚನೆಯನ್ನೇ ಮಾಡುತ್ತಿರಲಿಲ್ಲ. ಆದರೆ ಈಗ ವಾತಾವರಣ ಬದಲಾವಣೆ (ಕ್ಲೈಮೆಟ್ ಚೇಂಜ್) ಕೃಷಿಗೆ ಬಹುದೊಡ್ಡ ಕಂಟಕವಾಗಿ ಪರಿಣಮಿಸಿದೆ. ಅಕಾಲದಲ್ಲಿ ಮಳೆ, ಪ್ರವಾಹ ಹಾಗೂ ಮಳೆಗಾಲದಲ್ಲಿ ಬಿರುಬಿಸಿಲು ರೈತರನ್ನು ಕಂಗೆಡಿಸಿವೆ. 'ಬೀಜ, ಗೊಬ್ರ ರೆಡಿ ಇಟ್ಕಂಡು ಕೂತಿದ್ದೊಂದೇ. ಎರಡು ತಿಂಗಳಾದ್ರೂ ಹನಿ ಮಳಿ ಬರಲಿಲ್ರಿ' ಎಂಬ ನಿರಾಸೆಯ ದನಿ ಸಾಮಾನ್ಯವಾಗಿದೆ. ಇದ್ದುದರಲ್ಲೇ ನೀರಾವರಿ ಸೌಲಭ್ಯ ಬಳಸಿಕೊಂಡು ಬೆಳೆ ಬೆಳೆದವರು ಇನ್ನೇನು ಕೊಯ್ಲು ಮಾಡಬೇಕು ಎಂಬಷ್ಟರಲ್ಲಿ ವಾರಗಟ್ಟಲೇ ಮಳೆ ಸುರಿದು, ತೆನೆಯಲ್ಲೇ ಕಾಳು ಮೊಳಕೆಯೊಡೆಯುವುದನ್ನು ಹತಾಶೆಯಿಂದ ನೋಡುವ ಸ್ಥಿತಿ ಎದುರಾಗಿದೆ.

ಇಂಥ ಸ್ಥಿತಿಯಲ್ಲಿ ಅವಕಾಶ ಸಿಕ್ಕರೆ ಬೇಸಾಯ ತ್ಯಜಿಸಿ, ಪಟ್ಟಣಕ್ಕೆ ಗುಳೆ ಹೊರಡಲು ಸಿದ್ಧರಿರುವ ಶೇ. 50ರಷ್ಟು ರೈತರ ನಿರೀಕ್ಷೆಗಳಾದರೂ ಏನು?

ಹಲವು ಕಗ್ಗಂಟುಗಳ ಗೋಜಲಾಗಿರುವ ಕೃಷಿ ಕ್ಷೇತ್ರದಲ್ಲಿ ರೈತರ ಸಮಸ್ಯೆಗಳಿಗೆ ಅಲ್ಪಾವಧಿಗಿಂತ ದೀರ್ಘಕಾಲೀನ ಪರಿಹಾರ ಮಾರ್ಗಗಳನ್ನು ಹುಡುಕುವುದು ಅಗತ್ಯವಾಗಿದೆ. ಇದಕ್ಕಾಗಿ ನೀತಿ ನಿರೂಪಣೆ ಹಾಗೂ ಸಂಶೋಧನೆಗಳು ಏಕಕಾಲಕ್ಕೆ ಪ್ರಾಮಾಣಿಕವಾಗಿ ನಡೆಯಬೇಕು.

ಒಂದು ಗುಂಡುಸೂಜಿಗೆ ಅದರ ಉತ್ಪಾದಕನು ಬೆಲೆ ನಿಗದಿ ಮಾಡುತ್ತಾನೆ. ಆದರೆ ನೂರೆಂಟು ತಾಪತ್ರಯ ಎದುರಿಸಿ ಬೆಳೆಯುವ ಪದಾರ್ಥಕ್ಕೆ ಬೆಲೆ ನಿಗದಿ ಮಾಡಲು ರೈತನಿಗೆ ಆಗುತ್ತಿಲ್ಲ! ಆತನ ಉತ್ಪನ್ನಕ್ಕೆ ಸಂಬಂಧವೇ ಇರದವರು ಬೆಲೆ ನಿಗದಿ ಮಾಡುತ್ತಾರೆ. ಅದನ್ನು ಒಪ್ಪದ ರೈತರಿಗೆ ಪರ್ಯಾಯ ಮಾರ್ಗವೆಂದರೆ, ಆ ಪದಾರ್ಥವನ್ನು ವಾಪಸ್ ಒಯ್ಯುವುದು. ಬಹುಶಃ ಇಂಥ ಶೋಚನೀಯ ಸ್ಥಿತಿ ಇನ್ನಾರಿಗೂ ಇಲ್ಲ.

ಈ ಅಂಶವನ್ನು ಕೃಷಿ ವಿಜ್ಞಾನಿ ಎಂ.ಎಸ್. ಸ್ವಾಮಿನಾಥನ್ ಅರಿತಿದ್ದರು. ಕೇಂದ್ರ ಸರ್ಕಾರದ ಕೋರಿಕೆ ಮೇರೆಗೆ ಅವರು ಸವಿಸ್ತಾರವಾಗಿ ಅಧ್ಯಯನ ನಡೆಸಿ, ಐದು ಸಂಪುಟಗಳ ವಿಸ್ತೃತ ವರದಿಯನ್ನು 2006ರಲ್ಲಿ ನೀಡಿದ್ದರು. ಜಮೀನು ಸಿದ್ಧತೆಯಿಂದ ಶುರು ಮಾಡಿ, ಸಂಸ್ಕರಣೆವರೆಗೆ ತಗಲುವ ವೆಚ್ಚವನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿ, ಪ್ರತಿಯೊಂದು ಉತ್ಪನ್ನಕ್ಕೂ ಬೆಲೆ ನಿಗದಿ ಶಿಫಾರಸು ಮಾಡಿದ್ದರು. ವಿಷಾದವೆಂದರೆ, ಈಗಲೂ ಆ ಸಲಹೆಗಳು ಕಡತದಲ್ಲೇ ಉಳಿದಿರುವುದು. ಸರ್ಕಾರಗಳು ಆಗಾಗ್ಗೆ ಬೆಂಬಲ ಬೆಲೆ ಘೋಷಿಸುತ್ತವಾದರೂ, ಅದರಿಂದ ಪ್ರಯೋಜನ ಪಡೆಯುವ ರೈತರ ಪಾಲು ತೀರಾ ಅಲ್ಪ (ಹೆಚ್ಚು ಲಾಭ ಪಡೆಯುವ ವರ್ಗ ಯಾವುದು ಎಂಬುದು ಎಲ್ಲರಿಗೂ ಗೊತ್ತು)!

ವರ್ಷದಿಂದ ವರ್ಷಕ್ಕೆ ಉಳುಮೆ ಹಾಗೂ ಒಳಸುರಿಗಳ ವೆಚ್ಚವನ್ನು ಪರಿಗಣಿಸಿ, ಕೃಷ್ಯುತ್ಪನ್ನಕ್ಕೆ ವೈಜ್ಞಾನಿಕ ಬೆಲೆ ನಿಗದಿ ಮಾಡಬೇಕು ಎಂಬ ಅಳಲು ಈ ವರ್ಷದಲ್ಲಾದರೂ ಸಾಕಾರ ಆದೀತೇ?

ಅತ್ತ ರೈತ ಬೆಳೆದ ಬೆಳೆಗೆ ದರವಿಲ್ಲ; ಇತ್ತ ಗ್ರಾಹಕ ದುಬಾರಿ ಬೆಲೆ ತೆತ್ತು ಪದಾರ್ಥ ಖರೀದಿಸುತ್ತಾನೆ. ಈ ಅಂತರ ಹೆಚ್ಚಾದಷ್ಟೂ ದಲ್ಲಾಳಿ ಅಥವಾ ವ್ಯಾಪಾರಿಗಳಿಗೆ ಹೆಚ್ಚೆಚ್ಚು ಲಾಭಕರ! ಹಾಗಿದ್ದರೆ ಸರ್ಕಾರವೇನು ಮಾಡಬೇಕು? ಈ ಅಂತರವನ್ನು ಕಡಿತ ಮಾಡಲು ರೈತ ಮಾರುಕಟ್ಟೆಗಳನ್ನು ಸ್ಥಾಪಿಸಬೇಕು. ಪಾಶ್ಚಿಮಾತ್ಯ– ಅದರಲ್ಲೂ ದಕ್ಷಿಣ ಏಷ್ಯಾ ಮತ್ತು ಅಮೆರಿಕ, ಯೂರೋಪಿನ– ದೇಶಗಳಲ್ಲಿ ರೈತ ಮಾರುಕಟ್ಟೆಗಳು ಜನಪ್ರಿಯವಾಗುತ್ತಿವೆ. ಇಲ್ಲಿ ದಲ್ಲಾಳಿಯ ಹಂಗಿಲ್ಲದಂತೆ ನೇರವಾಗಿ ರೈತನೇ ತನ್ನ ಉತ್ಪನ್ನಗಳನ್ನು ಗ್ರಾಹಕನಿಗೆ ಮಾರಾಟ ಮಾಡುತ್ತಾನೆ. ಇಂಥ ವಿಶಿಷ್ಟ ಯೋಜನೆಗಳಿಗೆ ಸರ್ಕಾರದ ವಿವಿಧ ಇಲಾಖೆಗಳು ಹಾಗೂ ನಬಾರ್ಡ್‌ನಂಥ ಸಂಸ್ಥೆಗಳು ಉದಾರವಾಗಿ ನೆರವು ನೀಡಬೇಕು. ರೈತ ಮಾರುಕಟ್ಟೆಯ ಯಶಸ್ವಿ ನಿದರ್ಶನಗಳು ಪಕ್ಕದ ಆಂಧ್ರದಲ್ಲಿನ 'ರೈತ ಬಜಾರು'ಗಳಲ್ಲಿವೆ. ಅವುಗಳತ್ತ ನಮ್ಮ ಶಾಸನಸಭೆಗಳ ಪ್ರತಿನಿಧಿಗಳು ಮತ್ತು ಅಧಿಕಾರಿವರ್ಗದ ದೃಷ್ಟಿ ಹರಿದೀತು ಎಂದು ಭಾವಿಸೋಣವೇ?

ರೈತರ ಪದಾರ್ಥಗಳನ್ನು ನೇರ ಮಾರಾಟ ಮಾಡಿಕೊಡಲು 'ರೈತ ಉತ್ಪಾದಕ ಸಂಸ್ಥೆ'ಗಳ (ಎಫ್‌ಪಿಒ) ಸ್ಥಾಪನೆಗೆ ಸರ್ಕಾರ ಉತ್ತೇಜನ ಕೊಡುತ್ತಿದೆ. ಆದರೆ ಅವು ಟಾರ್ಪಾಲಿನ್, ರಸಗೊಬ್ಬರ ವಿತರಣೆಯ ಕೇಂದ್ರಗಳಾಗದೇ ಕೃಷಿ ಉತ್ಪನ್ನಗಳಿಗೆ ಸೂಕ್ತ ಬೆಲೆಯನ್ನೂ, ರೈತನಿಗೆ ಘನತೆಯನ್ನೂ ಕೊಡಿಸುವ ಕೆಲಸಕ್ಕೆ ಮುಂದಾಗಬೇಕಿದೆ. ಆ ನಿಟ್ಟಿನಲ್ಲಿ 'ಎಫ್‌ಪಿಒ'ಗಳ ಸಾಮರ್ಥ್ಯವೃದ್ಧಿ ಮಾಡುವ ನೀತಿಗಳನ್ನು

